ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಹಾಗೆ ಆಗಿಲ್ಲ. ಹೊರಗಿನವರನ್ನು ತಂದು ಸ್ಥಳೀಯ ಅಭ್ಯರ್ಥಿಯನ್ನು ಕೈಬಿಟ್ಟಂತ ಪ್ರಕರಣ ಇದೆ. ಅದರ ಬಗ್ಗೆ ಪರಿಶೀಲನೆ ನಡೆಸಿ ಕ್ರಮವನ್ನು ಕೈಗೊಳ್ಳುತ್ತೀರೋ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಅಂಗನವಾಡಿ ಸಮುದಾಯಕ್ಕೆ ಆಯ್ಕೆ ಮಾಡಬೇಕಾದರೆ ಅವರು 18ರಿಂದ 44 ವರ್ಷ ವಯಸ್ಸಿನ ಸ್ಥಳೀಯ ಮಹಿಳೆಯರಾಗಿರಬೇಕು. ಎಸ್.ಎಸ್.ಎಲ್.ಸಿ. ಅಥವಾ ಅದಕ್ಕಿಂತ ಕಡಿಮೆ ವಿದ್ಯಾರ್ಹತೆ ಇದ್ದರೂ ಕೂಡ ಅವರನ್ನು ಪರಿಗಣಿಸಬಹುದು. ಆದರೆ ಪರಿಗಣಿಸಿದವರಲ್ಲಿ ಅವರು ಸ್ಥಳೀಯ ಆಷ್ಟೇ ಅಲ್ಲ, ಅವರು ಸಮುದಾಯದಲ್ಲಿ ಒಮ್ಮತ ಇರುವ ಮಹಿಳೆಯರಾಗಿರಬೇಕು. ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿರುವ ಎಲ್ಲಾ 72 ಅಂಗನವಾಡಿ ಕಾರ್ಯಕರ್ತೆಯರು ಸ್ಥಳೀಯ ಮಹಿಳೆಯರಾಗಿದ್ದಾರೆ. ಅದರಲ್ಲಿ ಯಾವ ಅನುಮಾನವೂ ಇಲ್ಲ.

ಶ್ರೀ ಕುಂಪಿ ಸುಂದರರಾವ್ : ನನ್ನ ಹತ್ತಿರ ಮಾಹಿತಿ ಇದೆ. ನಾನು ನಿಮಗೆ ಕೊಡುತ್ತೇನೆ

ಅಧ್ಯಕ್ಷರು : ತಂದು ಕೊಡಿ. ನಿರ್ದಿಷ್ಟವಾದ ಪ್ರಕರಣ ಇದ್ದರೆ ತಂದುಕೊಡಿ. ಕ್ರಮ ತೆಗೆದು ಕೊಳ್ಳುತ್ತಾರೆ.

ಶ್ರೀ ಎಸ್. ಯೋಗೀಶ್ ಭಟ್ಟ : ಅಂಗನವಾಡಿ ಶಿಕ್ಷಕಿಯರ ಸಂಬಳ ಜಾಸ್ತಿ ಮಾಡುವಂಥ ಯೋಜನೆ ಏನಾದರೂ ಸರ್ಕಾರದ ಹತ್ತಿರ ಇದೆಯೇ? ಹಾಗೆ ಆಯಾಗಳಿಗೆ ಕೂಡ ಕೊಡುವಂಥ ಸಹಾಯಧನವನ್ನು ಹೆಚ್ಚಿಸಲು ಸರ್ಕಾರ ಯೋಚನೆ ಮಾಡುತ್ತಿದೆಯೋ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅಂಗನವಾಡಿ ಕಾರ್ಯಕರ್ತೆಯರಿಗೆ ಈಗಾಗಲೇ ನವೆಂಬರ್‌ದಿಂದ ನೂರು ರೂಪಾಯಿಗಳನ್ನು ನಮ್ಮ ರಾಜ್ಯಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. ಎಲ್ಲಾ ಕಡೆ ಕೊಡುತ್ತಿದ್ದೇವೆ. ಆಯಾಗಳ ಬಗ್ಗೆ ಕೂಡ ಪರಿಶೀಲನೆ ಮಾಡುವುದರಲ್ಲಿದ್ದೇವೆ.

ಅಧ್ಯಕ್ಷರು : ಕಾಟಮೇಯವರೇ ನಮ್ಮ ಪ್ರಶ್ನೆಗೆ ಪೂರಕವಾಗಿ ಸಚಿವರು ಸ್ವಲ್ಪ ಸಮಯ ಕೇಳಿದ್ದಾರೆ. ಅದಕ್ಕೆ ವಿಸ್ತೃತವಾದ ಉತ್ತರ ತರಿಸಿಕೊಡುವುದಕ್ಕೆ ಸಮಯ ಕಡಿಮೆ ಇರುವುದರಿಂದ ಸಮಯ ಅಪೇಕ್ಷೆ ಪಟ್ಟಿದ್ದಾರೆ. You will have to kindly co-operate.

**ಗದಗ್ ತಾಲ್ಲೂಕಿನ ಈಚಲಹಳ್ಳದಿಂದಾಗ್ಗೂ ನೀರಾವರಿ ಪ್ರದೇಶ.**

144 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಗದಗ ತಾಲ್ಲೂಕು ಚಿಕ್ಕಹಂದಿಗೋಳ ಗ್ರಾಮದಲ್ಲಿ ಈಚಲಹಳ್ಳಕ್ಕೆ ಕಟ್ಟಿರುವ ಬಾಂದಾರಿನಿಂದ ನೀರಾವರಿಯಾಗುತ್ತಿರುವ ಪ್ರದೇಶಗಳೆಷ್ಟು?*

ಅ) ಈ ನೀರಾವರಿ ಪ್ರದೇಶ ಹಚ್ಚಿಸಲು ಈಗಿರುವ ಕಾಲುವೆಗೆ ಲೈನಿಂಗ್ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರಸ್ತಾವನೆಯನ್ನು ಮಂಜೂರು ಮಾಡುವುದೇ?

ಈ) ಇದಕ್ಕಾಗಿ ಆಗುವ ಒಟ್ಟು ವೆಚ್ಚ ಎಷ್ಟು? ಮುಂದಿನ ಹಣಕಾಸು ವರ್ಷದಲ್ಲಿ ಈ ಕಾರ್ಯಕ್ಕೆ ಸರ್ಕಾರದವರು ಹಣವನ್ನು ಮೀಸಲಿಡುವರೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು) :

ಅ) ಗದಗ ತಾಲ್ಲೂಕು ಚಿಕ್ಕವಂದಿಗೋಳ ಗ್ರಾಮದಲ್ಲಿ ಯಾವುದೇ ಬಾಂದಾರ ಇರುವುದಿಲ್ಲ. ಆದರೆ ಈ ಗ್ರಾಮದ ಬಳಿ ಒಂದು ಕೆರೆಯಿದ್ದು ಇದರ ಅಧಿಕೃತ ಅಚ್ಚುಕಟ್ಟು 2018 ಎಕರೆ ಇದ್ದು ಈಗ 600 ಎಕರೆ ಪ್ರದೇಶದಲ್ಲಿ ನೀರಾವರಿ ಆಗುತ್ತಿದೆ.

ಆ) ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ) ಕಾಲುವೆ ಲೈನಿಂಗ್ ಕಾರ್ಯಕ್ಕೆ 75.76 ಲಕ್ಷ ರೂ.ಗಳ ಅಂದಾಜು ಮಾಡಲಾಗಿದೆ. ಈ ಕಾಮಗಾರಿಯ ಅವಶ್ಯಕತೆ ಬಗ್ಗೆ ಪರಿಶೀಲಿಸಿ ಅನುದಾನದ ಲಭ್ಯತೆಗನುಸಾರವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಡಿ.ಆರ್. ಪಾಟೀಲ್ : ಕಾಲ್ ಲೈನಿಂಗ್ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ತಾವು ಹೇಳಿದ್ದೀರಿ. ನಮ್ಮ ಜಿಲ್ಲಾ ಮಂತ್ರಿಗಳು ಸುಮಾರು ಆರು ತಿಂಗಳ ಹಿಂದೆ ಧಾರವಾಡದಲ್ಲಿ ಮೀಟಿಂಗ್ ಕರೆದಾಗ ಮುಂದಿನ ಹಣಕಾಸು ವರ್ಷದೊಳಗೆ ಇದನ್ನು ಕೈಗೆತ್ತಿಕೊಳ್ಳುತ್ತೇವೆಂದು ಭರವಸೆ ಕೊಟ್ಟರು. ಸಂಬಂಧಪಟ್ಟ ಅಧಿಕಾರಿಗಳಿಗೂ ಕೂಡ ಆದೇಶ ಕೊಟ್ಟರು. ಆದರೆ ತಾವು ಇನ್ನು ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಹೇಗೆ? ನಮ್ಮದು ಬರಗಾಲ ಪೀಡಿತ ಪ್ರದೇಶ ಈ ಕಾಲ್ ಲೈನಿಂಗ್ ಆದರೆ ಇನ್ನು 1400 ಎಕರೆ ಜಮೀನಿಗೆ ಹೆಚ್ಚು ನೀರಾವರಿ ಆಗುತ್ತದೆ. ಇನ್ನು ಮುಂದೆ ತಾವು ಈ ಸಚಿವ ಸಂಪುಟದಲ್ಲಿ ಇರುವುದಿಲ್ಲ. ಆದಕಾರಣ ದಯವಿಟ್ಟು ನಿಮ್ಮ ಕೊಡುಗೆ ಎಂದು ಈ ಹಣಕಾಸು ವರ್ಷದಲ್ಲಿ ಹಣ ಇಟ್ಟು, ಈ ಕೆಲಸವನ್ನು ಪ್ರಾರಂಭಿಸಬೇಕೆಂದು ಒತ್ತಾಯ ಮಾಡುತ್ತೇವೆ.

MR. SPEAKER : How can the Minister do it as a parting gift. ನೀವು ಬಿಟ್ಟು ಹೊರಟು ಹೋಗುತ್ತಿದ್ದೀರಲ್ಲ,, ಆದಕ್ಕೋಸ್ಕರ ನಿಮ್ಮ ಜ್ಞಾಪಕಾರ್ಥ ಕೊಡಿ ಎಂದು ಕೇಳುತ್ತಿದ್ದಾರೆ. ಸಾಧ್ಯವಾದರೆ ಹೂಂ ಎಂದು ಹೇಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಕಾಲ್ ಲೈನಿಂಗ್ ಬಗ್ಗೆ ಈ ವರ್ಷ ಖಂಡಿತವಾಗಿ ನಾವು ಮಾಡಿಸಿಕೊಡುತ್ತೇವೆ.

MR. SPEAKER : Are you satisfied?

SRI D.R. PATIL : Yes Sir.

ಅಧ್ಯಕ್ಷರು : ಪುಟ್ಟಣ್ಣಯ್ಯನವರೇ ತಮ್ಮ ಪ್ರಶ್ನೆಗೆ ಸ್ವಲ್ಪ ಸಮಯ ಕೇಳಿದ್ದಾರೆ. ಎಲ್ಲಾ ಕಡೆಯಿಂದ ಮಾಹಿತಿ ತರಿಸಬೇಕು. ಆದಕಾರಣ ತಮ್ಮ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ ಮುಂದೆ ತೆಗೆದುಕೊಳ್ಳೋಣ.

## ಚಿತ್ರದುರ್ಗ ಜಿಲ್ಲೆಯಲ್ಲಿ ಅಂತರಜಲ ಹೆಚ್ಚಿಸುವುದು

147 - ಶ್ರೀ ಎಂ. ಚಂದ್ರಪ್ಪ (ಹರಮಸಾಗರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿತ್ರದುರ್ಗ ಜಿಲ್ಲೆಯಲ್ಲಿರುವ ಕೆರೆಗಳು ಎಷ್ಟು 1995-96ನೇ ಸಾಲಿಗೆ ಎಷ್ಟು ಕೆರೆಗಳು ತುಂಬಿದ್ದವು?*

ಆ) *ಈ ಕೆರೆಗಳನ್ನು 1996-97ನೇ ಸಾಲಿನಿಂದ ತೂಬುಗಳನ್ನು ಮುಚ್ಚಿಸಿ ಅಂತರ ಜಲವನ್ನು ಹೆಚ್ಚಿಸುವ ಕಾರ್ಯಕ್ರಮವೇನಾದರೂ ಇದೆಯೇ, ಈ ಕಾರ್ಯಕ್ರಮದಿಂದ ಸುಮಾರು 300 ಅಡಿಯಿಂದ 400 ಅಡಿ ಕೊಳವೆ ಬಾವಿಗಳನ್ನು ಕೊರೆದರೂ ನೀರು ಬಾರದೆ ಇರುವುದರಿಂದ ಇಮ ಅವಶ್ಯಕತೆ ಎಂಬುವುದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಕೆರೆಗಳ ತೂಬುಗಳನ್ನು ಮುಚ್ಚಿ ಕೆರೆ ತುಂಬಿ ಪಕ್ಷದಲ್ಲಿ ಕೋಡಿಗಳ ಮುಖಾಂತರ ನೀರು ಬಿಟ್ಟು ಉಳಿದ ನೀರು ಇಂಗುವುದರಿಂದ ಅಂತರ ಜಲ ಜಾಸ್ತಿಯಾಗುತ್ತದೆ ಎಂಬುದು ಸರ್ಕಾರಕ್ಕೆ ಗೊತ್ತಿದಿಯೇ?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) :

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 367 ಕೆರೆಗಳು ಇವೆ. 1995-96ನೇ ಸಾಲಿನಲ್ಲಿ ಮಳೆಯ ಅಭಾವದಿಂದ ಯಾವ ಕೆರೆಗಳೂ ತುಂಬಿರುವುದಿಲ್ಲ.

ಆ) ಇಲ್ಲ, ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಚಿತ್ರದುರ್ಗ ಜಿಲ್ಲೆಯು ಬರಪೀಡಿತ ಪ್ರದೇಶವಾಗಿದ್ದು ಮಳೆ ಎಂದು ಕೆರೆ ತುಂಬಿದಲ್ಲಿ ಅಧಿಕೃತ ಅಚ್ಚುಕಟ್ಟಿಗೆ ನೀರು ಒದಗಿಸಬೇಕಾಗಿರುತ್ತದೆ. ಆದ ಕಾರಣ ತೂಬನ್ನು ಮುಚ್ಚಿ ನಿರು ಸಂಗ್ರಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಚಂದ್ರಪ್ಪ : ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಕೆರೆಗಳು ಇವೆ? 1995-96ನೇ ಸಾಲಿನಲ್ಲಿ ಎಷ್ಟು ಕೆರೆಗಳು ತುಂಬಿರೆ ಎಂದು ಕೇಳಿದರೆ ಒಂದು ಕೆರೆಯೂ ತುಂಬಿಲ್ಲ ಎನ್ನುತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಕೆಲವು ಭಾಗಗಳಲ್ಲಿ ಮಳೆ ಬಂದರೂ ಸಹ ಆ ಕೆರೆಗಳ ತೂಬುಗಳು ಸರಿ ಇಲ್ಲದೆ ಇರುವುದರಿಂದ ನೀರು ಬಂದರೂ ಸಹ ಬಂದ ದಾರಿಗೆ ಸುಂಕವಿಲ್ಲ ಎನ್ನುವಂತಾಗಿದೆ. ಇದಕ್ಕೆ ಕಾರಣ ಆ ಕೆರೆಗಳು ಬಹಳ ವರ್ಷಗಳಿಂದ ದುರಸ್ತಿ ಕಾಣದೆ ಹಾಳಾಗಿ ನೀರು